ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1013 /2021 .

ಪ್ರಾ.ಸಾ. :6
ಚಾ.ಸಾ. :7

ಹೆಸರು : ಜಯಣ್ಣ
ತಂದೆಯ ಹೆಸರು : ಸಿದ್ದಲಿಂಗಪ್ಪ
ವಯಸ್ಸು : 48 ವರ್ಷ
ಉದ್ಯೋಗ : ವ್ಯವಸಾಯ
ವಿಳಾಸ : ಯಮಗುಂಬ

... .......................................................................................................... ...

ದಿನಾಂಕ 24 ನೇ ಏಪ್ರಿಲ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿಯು ಗುರುತಿಸಿರುವ ದಾಖಲೆಯು ಸ್ವತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿ ಪಿ 12 ಎಂದು ಈಗಾಗಲೇ ಗುರುತಿಸಿದ್ದು, ಸಾಕ್ಷಿಯ ಸಹಿ ನಿ ಪಿ 12 ಬಿ ಎಂದು ಗುರುತಿಸಲಾಯಿತು. ನಿ ಪಿ 12 ಕ್ಕೆ ಸಹಿಯನ್ನು ಗೋಣಿಕೊಪ್ಪ ಠಾಣೆಯಲ್ಲಿ ಮಾಡಿದ್ದೆನು. ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಹಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ : -

ದಿ. 25.06.2021 ರಲ್ಲಿ ಗೋಣಿಕೊಪ್ಪ ಪೋಲೀಸರು ನನ್ನನು ಹಾಗೂ ಸ್ವಾಮಿರವರನ್ನು ಕರೆಸಿದ್ದರು ಎಂದರೆ ಸರಿ. ಆ ದಿನ ಆರೋಪಿ 1 ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಂಡು ಠಾಣೆಗೆ ಹಾಜರಾಗಿ ತಾನು ಕಳ್ಳತನ ಮಾಡಿದ ರೂ. 68 ಸಾವಿರ ಹಣದಲ್ಲಿ ರೂ. 20 ಸಾವಿರ ಹಣವನ್ನು 2 ನೇ ಆರೋಪಿಗೆ ನೀಡಿದ್ದೆನು, ಉಳಿದ 48 ಸಾವಿರ ಹಣದಲ್ಲಿ ಸ್ವಲ್ಪ ಖರ್ಚು ಮಾಡಿ ಉಳಿದ 31 ಸಾವಿರ ಹಣವನ್ನು, ಕಳ್ಳತನ

ಮಾಡಿದ ಇಂಜೆಕ್ಷನ್, ಮಾತ್ರೆ ಹಾಗೂ ಕಂಪ್ಯೂಟರ್ ಮೋಡೆಮ್ ಅನ್ನು ಹಾಜರುಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಆಗ ಪೋಲೀಸರು ನಮ್ಮ ಸಮಕ್ಷಮ ಸದರಿ ಹಣ ಹಾಗೂ ವಸ್ತುಗಳನ್ನು ಅಮಾನತ್ತುಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಹಣದಲ್ಲಿ 2 ಸಾವಿರ ಮುಖಬೆಲೆಯ 11 ನೋಟುಗಳನ್ನು, 500 ರೂ ಮುಖಬೆಲೆಯ 18 ನೋಟುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣವನ್ನು ಬಿಳಿ ಬಣ್ಣದ ಲಕೋಟೆಗೆ ಹಾಕಿ, ನಮ್ಮ ಸಹಿ ಪಡೆದು ಅಂಟಿಸಲಾಯಿತು ಎಂದರೆ ಸರಿ. ಆ ನಂತರ 15 ಮಾತ್ರೆಗಳ 6 ಶೀಟುಗಳನ್ನು ಒಟ್ಟು 90 ಮಾತ್ರೆಗಳನ್ನು ಅಮಾನತ್ತುಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಇನ್ಸುಲಿನ್ RYZODEG ಎಂಬ 5 ಇಂಜೆಂಕ್ಷನ್, APIDRA ಎಂಬ ಇನ್ಸುಲಿನ್ ಅಮಾನತ್ತುಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಆಗ ನಿಪಿ-12 ಕ್ಕೆ ಸಹಿ ಹಾಕಿದ್ದೇನೆ ಎಂದರೆ ಸಹಿ ಹಾಕಿದ್ದೇನೆ ಎನ್ನುತ್ತಾರೆ. ಸದರಿ ಮಹಜರನ್ನು ಮ. 3.30 ರಿಂದ 4.30 ಸಮಯದಲ್ಲಿ ಮಹಜರು ಮಾಡಿದರು ಎಂದರೆ ಸರಿ. ಮೇಲೆ ಹೇಳಿದಂತೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿರಾಕಸಿದ ಹೇಳಿಕೆಯನ್ನು ನಿ ಪಿ 14 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> :- ಆರೋಪಿ ಪರ ವಕೀಲರವರಿಂದ :-

ಆರೋಪಿ ಪರ ವಕೀಲರು ಪಾಟೀ ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sdxx-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)